ಯಾರಯಾರದೋ ಮನೆಗೆ ಹೋಗಿ ಏನೇನೋ ತಿಂದು ರಂಪ ಮಾಡಿ ಊರವರ ಬಾಯಿಗೆ ನಮ್ಮನ್ನು ಬೀಳಿಸಿ ಹೊರಟು ಹೋಗುತ್ತೀರಿ. ಆಮೇಲೆ ನಾವು ಇದ್ದು ಸಂಭಾಳಿಸುವುದು ಹೇಗೆ ಎಂದು ಪುಟ್ಟನಿಗೆ ದೊಡ್ಡಣ್ಣ ಹೊರಗೆ ಜಗುಲಿಯಲ್ಲಿ ದೋಷಾರೋಪಿಸಿದ್ದು ಉರ್ಮಿಗೆ ತಿಳಿಯದೇ ಇರಲಿಲ್ಲ. ಅಸಲಿಗೆ ಪುಟ್ಟ ಹೊರಗಡೆಯಿದ್ದಾಗ ಎಲ್ಲವನ್ನೂ ತಿನ್ನುತ್ತಿದ್ದನಾದರೂ ಊರಿನವರ ಕಿರಿಕಿರಿ ಬೇಡವೆಂದು ಮನೆಗೆ ಬಂದಾಗ ಮಾತ್ರ ಮಡಿವಂತನ ಪೋಷಾಕು ತೊಟ್ಟುಕೊಳ್ಳುತ್ತಿದ್ದ ಮತ್ತು ಅವನ ಆ ಸ್ವಭಾವವನ್ನು ಉರ್ಮಿ ಅಷ್ಟರಲ್ಲಾಗಲೇ ಗುರುತಿಸಿದ್ದಳು. ಆದದ್ದು ಆಗಲಿ ಪೇಟೆಗೆ ಹೋಗಿ ಮಲೆನಾಡಿನ ಲೋಕಲ್ ರುಚಿ ನೋಡಲೇಬೇಕೆಂದು ಆಕೆ ಯೋಚಿಸುತ್ತಿದ್ದಳು. ಪುಟ್ಟನನ್ನು ಬಿಟ್ಟು ತಾನೊಬ್ಬಳೇ ಸ್ಕೂಟಿ ತೆಗೆದುಕೊಂಡು ಹೋಗುವುದೆಂದು ತೀರ್ಮಾನಿಸಿದ್ದಳು. ಮನೆಯಲ್ಲಿದ್ದ ಸ್ಕೂಟಿ ಓಡಿಸಬಹುದೆಂಬ ಧೈರ್ಯವನ್ನು ಹೊರತು ಪಡಿಸಿ ಸ್ಕೂಟಿಯ ಪರವಾನಗಿಯಾಗಲೀ ಅಥವಾ ಓಡಿಸಿ ಅಭ್ಯಾಸವಾಗಲೀ ಉರ್ಮಿಗೆ ಇರಲಿಲ್ಲ ಮತ್ತು ಹೋಗಬೇಕಾದ ದಾರಿಯೂ ತಿಳಿದಿರಲಿಲ್ಲ. ಉರ್ಮಿ ಒಬ್ಬಳೇ ಹೋಗುವುದನ್ನು ನಿರಾಕರಿಸಿದ ಪುಟ್ಟನ ದೊಡ್ಡಣ್ಣ ಜತೆಗೆ ಪುಟ್ಟನೂ ಹೋಗುವುದಾದರೆ ಅಡ್ಡಿಯಿಲ್ಲವೆಂದ. ಉರ್ಮಿಯ ಇರಾದೆ ತಿಳಿದಿದ್ದ ಪುಟ್ಟನಿಗೆ ಮನೆಬಿಟ್ಟು ಹೊರಡಲು ಮನಸ್ಸಿರಲಿಲ್ಲ.

ಮರುದಿನ ಬೆಳಗ್ಗೆ ಉರ್ಮಿ ಸ್ಕೂಟಿಯನ್ನು ಚಲಾಯಿಸಿದಳು. ಒಬ್ಬಳೇ ಮೊಬೈಲ್‌ನಲ್ಲಿ ಮ್ಯಾಪ್ ನೋಡಿಕೊಂಡು ಸ್ಕೂಟಿ ಓಡಿಸುವುದು ಕಷ್ಟವೆನಿಸಿದರೂ ಆಕೆ ಪಟ್ಟುಬಿಡಲಿಲ್ಲ. ಪೇಟೆಯ ಕಿರಿದಾದ ರಸ್ತೆಗಳಲ್ಲಿ ವಾಹನಗಳು ಹೇಗೆ ಬೇಕೋ ಹಾಗೆ ನುಗ್ಗಿ ಬರುತ್ತಿದ್ದವು. ಮಲೆನಾಡಿನ ಅತ್ಯುತ್ತಮ ರುಚಿಯ ಉತ್ಕೃಷ್ಟ ತಿಂಡಿಗಳು ದೊರೆಯುವುದೆಂದು ಮೊಬೈಲ್ ರೆಕಮಂಡ್ ಮಾಡಿದ ಹವಾನಿಯಂತ್ರಿತ ರೆಸಾರ್ಟ್ 'ದಿ ಜೋಗ್ ಆಲ್ ಸೀಸನ್'ಗೆ ಉರ್ಮಿಯ ಸ್ಕೂಟಿ ಅಡಿಯಿಟ್ಟಿತು. ಮಲೆನಾಡಿಗರೇ ಇವೆಲ್ಲಾ ನಿಜವಾಗಿಯೂ ತಮ್ಮ ಹಿರಿಯರು ಬಳಸಿದ ವಸ್ತುಗಳು ಅಹುದೇ ಎಂದು ಹುಬ್ಬೇರಿಸುವಷ್ಟು ತರಹೇವಾರಿ ಕರಕುಶಲ ಸಾಮಗ್ರಿಗಳನ್ನು ಅಲ್ಲಿನ ಐಷಾರಾಮಿ ಹಜಾರದಲ್ಲಿ ಒಪ್ಪವಾಗಿ ಪ್ರದರ್ಶನಕ್ಕೆ ಇಟ್ಟಿದ್ದರು. ತುಸು ಮುಂದಕ್ಕೆ ರೆಸ್ಟೊರೆಂಟ್‌ನ ಪ್ರವೇಶದ್ವಾರದಲ್ಲಿ ಉದ್ದ ಜಡೆಯ ಮಲೆನಾಡ ಬೆಡಗಿಯೊಬ್ಬಳು ಕೈ ಮುಗಿದು ನಾಜೂಕಿನ ನಕಲಿ ಇಂಗ್ಲಿಷ್ ಉಚ್ಚಾರಣೆಯಲ್ಲಿ ಅತಿಥಿಗಳನ್ನು ಸ್ವಾಗತಿಸುತ್ತಿದ್ದಳು. ಸೀರೆಯ ನೆರಿಗೆ ಹಾಳಾಗದಂತೆ ಕ್ಯಾಟ್ವಾಕ್ ಮಾಡುತ್ತಿದ್ದ ಆ ಯುವತಿಯ ಪಾಡನ್ನು ನೋಡಿ ಉರ್ಮಿಗೆ ನಗುಬಂತು. ಬಾಗಿಲು ದಾಟಿ ಒಳ ಬಂದ ತಕ್ಷಣ ನಯವಾಗಿ ಅದೇ ಯುವತಿ, ವೆಜ್ಜಾ, ನಾನ್ವೆಜ್ಜಾ ಕೇಳಿ ವಿಂಗಡಿಸಿ, ಮುಂದಿನ ಇನ್ನೊಂದು ಬಾಗಿಲಿಗೆ ಅತಿಥಿಗಳನ್ನು ರವಾನಿಸುತ್ತಿದ್ದಳು. ಗರಿಗರಿ ಬಿಳಿ ಅಂಗಿ ಪಂಚೆ ಮತ್ತು ಕೇಸರಿ ಬಣ್ಣದ ಶಲ್ಯವನ್ನು ಹೆಗಲಿಗೇರಿಸಿಕೊಂಡ ವೇಟರ್‌ಗಳು ಟೇಬಲ್ ಸುತ್ತಾ ಓಡಾಡುತ್ತಿದ್ದರು. ಅವರೆಲ್ಲರ ತಲೆಯ ಮೇಲೆ ಹಾಳೆಯ ಟೊಪ್ಪಿಗಳು ಇಲ್ಲಿ ತಮ್ಮ ಔಚಿತ್ಯವೇನು ಎನ್ನುವ ಕ್ರೈಸಿಸ್‌ನಲ್ಲಿ ಸಿಕ್ಕಿಕೊಂಡಿದ್ದವು. ವೃತ್ತಾಕಾರದಲ್ಲಿ ಜೋಡಿಸಿದ್ದ ಟೇಬಲ್‌ಗಳ ನಡುಮಧ್ಯೆ ಪ್ರಶ್ನಾರ್ಥಕ ಚಿಹ್ನೆಯಂತೆ ಭೂತಾಕಾರದ ಎತ್ತಿನ ಗಾಡಿಯೊಂದು ನಿಂತಿತ್ತು. ಉರ್ಮಿ ಇದನ್ನೆಲ್ಲಾ ತನ್ನ ಮೊಬೈಲ್‌ನಲ್ಲಿ ಫೋಟೊ ತೆಗೆದುಕೊಂಡಳಾದರೂ ಅವಳಿಗೆ ಅಲ್ಲಿನ ಕೃತ್ರಿಮ ವಾತಾವರಣ ಉಸಿರು ಕಟ್ಟಿಸುವಂತೆನಿಸಿತು. ಬಂದಿದ್ದಕ್ಕೆ ಏನೋ ತಿಂದು ಹೊರಡುವುದೆಂದು ತೀರ್ಮಾನಿಸಿ ಪರಿಚಾರಕನನ್ನು ಕರೆದರೆ ಆಕೆಯ ಟೇಬಲ್‌ಗೆ ಬಂದವ ಬಂಗಾಳಿ ಬಡಿಸುಗ! ಮಲೆನಾಡಿನ ಅತ್ಯುತ್ತಮ ತಿನಿಸುಗಳ ಬಗ್ಗೆ ಹಾಳೆಟೊಪ್ಪಿ ಹಾಕಿದ ಬಂಗಾಳಿಯವನ ಬಳಿ ಅವನ ಭಾಷೆಯಲ್ಲೇ ಉರ್ಮಿ ವಿಚಾರಿಸಿದಳು. ಆತನಿಗೆ ಆ ಸಣ್ಣ ಪಟ್ಟಣದಲ್ಲಿ ಸಾವಿರಾರು ಮೈಲಿ ದೂರದ ತಮ್ಮ ಊರಿನವರ್ಯಾರೋ ಸಿಕ್ಕ ಖುಷಿಯಲ್ಲಿ ಅತಿಯಾಗಿಯೇ ಉಪಚರಿಸಿದ. ಹೆಚ್ಚು ಸಮಯ ಅಲ್ಲಿರದೇ ಉರ್ಮಿ ಮುಂದುವರೆದಳು.

ಪೇಟೆಯ ಗಲ್ಲಿ ಗಲ್ಲಿ ಸುತ್ತಿ ಕಡೆಯಲ್ಲಿ ಮೀನು ಮಾರುಕಟ್ಟೆಗೆ ಬಂದಳು. ಅಲ್ಲಿ ಮಾರಾಟವಾಗುತ್ತಿದ್ದ ಬಗೆಬಗೆಯ ಮೀನುಗಳ ನಡುವೆ ರೂಹಿ ಮೀನನ್ನು ನೋಡಿ ಆಶ್ಚರ್ಯ ಚಕಿತಳಾದಳು. ಬಂಗಾಳಿಗರ ನೆಚ್ಚಿನ ಮೀನೊಂದು ಮಲೆನಾಡಿನ ತೊರೆಗಳಲ್ಲಿ ಬೆಳೆದು ಮಾರುಕಟ್ಟೆಯಲ್ಲಿ ಲೋಕಲ್ ಮೀನಾಗಿ ಕೊಳ್ಳುವವರ ಕೈಚೀಲ ಸೇರುತ್ತಿತ್ತು. ಮಾರುಕಟ್ಟೆಯ ಅಂಚಿನಲ್ಲಿ ಬಣ್ಣ ಮಾಸಿದ ಪುರಾತನ ಹೊಟೇಲ್ ಒಂದು ಉರ್ಮಿಯ ಕಣ್ಣನ್ನು ಸೆಳೆಯಿತು. ಹತ್ತಿರ ಹೋಗಿ ನೋಡಿದರೆ